**ಹಿರಿಯ ಸಿವಿಲ್ ನ್ಯಾಯಾಧಿಶರು ಮತ್ತು ಜೆಎಂಎಫ್ ಸಿ ರವರ ನ್ಯಾಯಾಲಯ, ದೇವದುರ್ಗ.**

**ಸಿ.ಸಿ. ನಂ.234/2025**

ಪಿರ್ಯಾದುದಾರರು : ಕರ್ನಾಟಕ ರಾಜ್ಯ,
ಗಬ್ಬೂರು ಪೊಲೀಸ ಠಾಣೆ.

**ವಿರುದ್ಧ** –

ಆರೋಪಿತರಾದ 1. ಮಹೆಬೂಬ ಅಲಿ ತಂದೆ ಮೋತಿ ಸಾಬ,
ವಯಸ್ಸು: 54 ವರ್ಷಗಳು, ಉಃ ಒಕ್ಕಲುತನ,

3. ಖಾಸಿಂ ತಂದೆ ಮಹೆಬೂಬ ಅಲಿ,
ವಯಸ್ಸು: 29 ವರ್ಷ, ಉಃ ಒಕ್ಕಲುತನ,
ಇಬ್ಬರೂ ಸಾಃ ಮಲದಕಲ್, ತಾಃ ದೇವದುರ್ಗ.

**ದೋಷರೋಪಣೆ**

ಶ್ರೀ. ಸುರೇಶ ಅಣ್ಣಪ್ಪ ಸವದಿ., ಹಿರಿಯ ಸಿವಿಲ್ ನ್ಯಾಯಾಧಿಶರು ಮತ್ತು ಜೆ.ಎಂ. ಎಫ್. ಸಿ ರವರ ನ್ಯಾಯಾಧೀಶರು, ದೇವದುರ್ಗ, ಈ ಮೂಲಕ ಆರೋಪಿತರಾದ ನಿಮ್ಮಗಳ ಮೇಲೆ ಮಾಡುವ ದೋಷಾರೋಪಣೆ ಏನೆಂದರೆ–

ದಿನಾಂಕ 02.11.2024 ರಂದು ಸಾಯಂಕಾಲ 07.00 ಗಂಟೆ ಸಮಯದಲ್ಲಿ ಗಬ್ಬೂರು ಪೊಲೀಸ್ ಠಾಣಾ ಸರಹದ್ದು, ದೇವದುರ್ಗ ತಾಲ್ಲೂಕು, ಮಲದಕಲ್ ಗ್ರಾಮದಲ್ಲಿ ಸಾಕ್ಷಿ–1 ರವರು ಸಾಕ್ಷಿ–4 ರವರೊಂದಿಗೆ ತಮ್ಮ ಅಂಗಡಿಯ ಮುಂದೆ ಪಟಾಕಿ ಹೊಡೆಯುತ್ತಿದ್ದಾಗ 1 ಮತ್ತು 3 ನೇ ಆರೋಪಿತರಾದ ನೀವುಗಳು ಸಾಕ್ಷಿ–1 ರವರಿಗೆ ನಮ್ಮ ಅಂಗಡಿ ಮುಂದೆ ಪಟಾಕಿ ಹೊಡೆಯುತ್ತಿಯ ಏನು ಲೇ ಅಂತಾ ಅವಾಚ್ಯವಾಗಿ ಬೈದು ಆ ಮೂಲಕ ಭಾರತೀಯ ನ್ಯಾಯ ಸಂಹಿತಾ ಕಲಂ.352 ಸಹ ಕಲಂ.3(5) ರಡಿಯಲ್ಲಿ ಶಿಕ್ಷಾರ್ಹ ಅಪರಾಧ ಮಾಡಿರುವಿರಿ.

ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ, 3 ನೇ ಆರೋಪಿತರಾದ ನೀವು ಕಟ್ಟಿಗೆಯಿಂದ ಸಾಕ್ಷಿ–5 ರವರಿಗೆ ಕೈಗೆ ಹೊಡೆದು ಆ ಮೂಲಕ ಆ ಮೂಲಕ ಭಾರತೀಯ ನ್ಯಾಯ ಸಂಹಿತಾ ಕಲಂ.118(1) ಸಹ ಕಲಂ.3(5) ರಡಿಯಲ್ಲಿ ಶಿಕ್ಷಾರ್ಹ ಅಪರಾಧ ಮಾಡಿರುವಿರಿ.

ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ, 3 ನೇ ಆರೋಪಿತರಾದ ನೀವು ಸಾಕ್ಷಿ-5 ರವರಿಗೆ ಬಾಯಿಂದ ಕಚ್ಚಿ ಒಳಪೆಟ್ಟುಗೊಳಿಸಿ ಆ ಮೂಲಕ ಭಾರತೀಯ ನ್ಯಾಯ ಸಂಹಿತಾ ಕಲಂ.115(2) ಸಹ ಕಲಂ.3(5) ರಡಿಯಲ್ಲಿ ಶಿಕ್ಷಾರ್ಹ ಅಪರಾಧ ಮಾಡಿರುವಿರಿ.

ಸದರೀ ಅಪರಾಧಗಳು ಈ ನ್ಯಾಯಾಲಯದ ಸಂಜ್ಞೆಯಲ್ಲಿ ಬರುತ್ತವೆ ಮತ್ತು ಸದರಿ ವಿಚಾರಣೆಯು ನನ್ನ ಸಮಕ್ಷಮ ನಡೆಯಬೇಕೆಂದು ಈ ಮೂಲಕ ನಿರ್ದೇಶಿಸುತ್ತೇನೆ.

(ಈ ದೋಷಾರೋಪಣೆಯನ್ನು ಈ ದಿನ ದಿನಾಂಕಃ 27.05.2026 ರಂದು ಆರೋಪಿತರಿಗೆ ತೆರೆದ ನ್ಯಾಯಾಲಯದಲ್ಲಿ ಕನ್ನಡ ಭಾಷ್ಷೆಯಲ್ಲಿ ಓದಿ ಹೇಳಿ ಆತನ ಉತ್ತರವನ್ನು ಯಥಾವತ್ತಾಗಿ ದಾಖಲಿಸಿದೆ)

ಓ. ಹೇ. ಕೇ. ಸರಿ ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆಎಂಎಫ್ ಸಿ ದೇವದುರ್ಗ.

**ಹಿರಿಯ ಸಿವಿಲ್ ನ್ಯಾಯಾಧಿಶರು ಮತ್ತು ಜೆಎಂಎಫ್ ಸಿ ರವರ ನ್ಯಾಯಾಲಯ, ದೇವದುರ್ಗ.**

**ಸಿ.ಸಿ. ನಂ.234/2025**

ಪಿರ್ಯಾದುದಾರರು : ಕರ್ನಾಟಕ ರಾಜ್ಯ,
ಗಬ್ಬೂರು ಪೊಲೀಸ ಠಾಣೆ.

**ವಿರುದ್ಧ** –

ಆರೋಪಿತರಾದ 1. ಮಹೆಬೂಬ ಅಲಿ ತಂದೆ ಮೋತಿ ಸಾಬ,
ವಯಸ್ಸು: 54 ವರ್ಷಗಳು, ಉಃ ಒಕ್ಕಲುತನ,

3. ಖಾಸಿಂ ತಂದೆ ಮಹೆಬೂಬ ಅಲಿ,
ವಯಸ್ಸು: 29 ವರ್ಷ, ಉಃ ಒಕ್ಕಲುತನ,
ಇಬ್ಬರೂ ಸಾಃ ಮಲದಕಲ್, ತಾಃ ದೇವದುರ್ಗ.

:: **ಆಪಾದನೆ** ::

1. ನಿಮಗೆ ಓದಿ ಹೇಳಿದ ಆಪಾದನೆ ಅರ್ಥವಾಯಿತಾ?

ಉತ್ತರಃ–

2. ನೀವು ತಪ್ಪು ಒಪ್ಪಿಕೊಳ್ಳುವಿರೋ ಅಥವಾ ವಿಚಾರಣೆ ಆಗಬೇಕಾ?

ಉತ್ತರಃ–

ಮೇಲಿನ ಹೇಳಿಕೆಯನ್ನು ಆಪಾದಿತರಿಗೆ ತಿಳಿಯುವಂತೆ ಆತನ ಭಾಷೆಯಲ್ಲಿ ಓದಿ, ಹೇಳಿ ತಿಳಿಸಿ ಅವರ ಹೇಳಿಕೆ ಪಡೆದುದಾಗಿ ದೃಢೀಕರಿಸಿರುತ್ತೇನೆ.

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆಎಂಎಫ್‌ಸಿ., ದೇವದುರ್ಗ.